# ಬದುಕಿನ ಅಷ್ಟ ಸೂತ್ರಗಳು

| | |
|---|---|
| ಉತ್ಸಾಹಿಗಳಾಗಿರಿ | ದುಡುಕಬೇಡಿ |
| ತಾಳ್ಮೆಯಿರಲಿ | ಸೋಮಾರಿಗಳಾಗಬೇಡಿ |
| ಮಿತವ್ಯಯಿಗಳಾಗಿರಿ | ಜಿಪುಣರಾಗಬೇಡಿ |
| ಮೃದುವಾಗಿರಿ | ಗುಲಾಮರಾಗಬೇಡಿ |
| ಕರುಣೆಯಿರಲಿ | ಮೋಸಹೋಗಬೇಡಿ |
| ದಾನಿಗಳಾಗಿರಿ | ದರಿದ್ರರಾಗಬೇಡಿ |
| ಶೂರರಾಗಿರಿ | ಕಟುಕರಾಗಬೇಡಿ |
| ತ್ಯಾಗಿಗಳಾಗಿರಿ | ಅಡವಿಗೆ ಹೋಗಬೇಡಿ |

ತನ್ನೊಳಗೆ ನಗುವವನು ಜ್ಞಾನಿ

ತಾನೇ ನಗುವವನು ಹುಚ್ಚ.

ತನ್ನ ಗೆಳತಿಯ ನೆನೆದು ನಗುವವನು ಪ್ರೇಮಿ.

ಮೈಮರೆತು ನಗುವವನು ರಸಿಕ.

ಇನ್ನೊಬ್ಬರಿಗಾಗಿ ನಗುವವನು ಅಯೋಗ್ಯ.

ಇನ್ನೊಬ್ಬರನ್ನು ನೋಡಿ ನಗುವವನು ಗರ್ವಿ.

ಇನ್ನೊಬ್ಬರಿಗೆ ನೋವಾಗುವಂತೆ ನಗುವವನು ಖಳನಾಯಕ.

ನಕ್ಕು ಮನರಂಜನೆ ನೀಡುವವನು ವಿದೂಷಕ.

ನಗುತ್ತಲೇ ವಿಜಯ ಸಾಧಿಸುವವನು ಬುದ್ಧಿವಂತ.

ಗೆದ್ದರೂ ನಗದವನು ಕರ್ಮಯೋಗಿ.

ಇದರಲ್ಲಿ ನೀವ್ಯಾರು ?

ಸ್ವೀಕರಿಸುವ ಮನಸಿದ್ದರೆ ಸದ್ಗುಣಗಳನ್ನು ಸ್ವೀಕರಿಸು

ಈಜುವ ಮನಸಿದ್ದರೆ ಜ್ಞಾನಸಾಗರದಲ್ಲಿ ಈಜು

ನಡೆಯುವ ಮನಸಿದ್ದರೆ ಸನ್ಮಾರ್ಗದಲ್ಲಿ ನಡೆ

ಮಾತನಾಡುವುದಿದ್ದರೆ ಸತ್ಯವನ್ನೇ ಮಾತನಾಡು

ಹಾಡುವುದಿದ್ದರೆ ಅನುಭವದ ಮಾತುಗಳನ್ನು ಹಾಡು

ಕೇಳುವುದಿದ್ದರೆ ಸದುಪದೇಶಗಳನ್ನು ಕೇಳು

ದೊರಕಿಸುವುದಿದ್ದರೆ ಜಯವನ್ನೇ ದೊರಕಿಸು

ನುಂಗುವ ಇಚ್ಛೆ ಇದ್ದಲ್ಲಿ ಸಿಟ್ಟನ್ನೇ ನುಂಗು

ತ್ಯಜಿಸುವುದಿದ್ದಲ್ಲಿ ದುರ್ಗುಣಗಳನ್ನೇ ತ್ಯಜಿಸು

# ಗೀತೆಯ ಸಾರ

ಆದದ್ದೆಲ್ಲಾ ಒಳ್ಳೆಯದಕ್ಕೇ ಆಗಿದೆ.
ಆಗುವುದೆಲ್ಲಾ ಒಳ್ಳೆಯದೇ ಆಗುತ್ತಿದೆ.
ಆಗಲಿರುವುದೂ ಒಳ್ಳೆಯದೇ ಆಗಲಿದೆ.
ರೋದಿಸಲು ನೀನೇನು ಕಳೆದುಕೊಂಡಿರುವೆ.
ಕಳೆದುಕೊಳ್ಳಲು
ನೀನು ತಂದಿರುವುದಾದರೂ ಏನು.
ನಾಶವಾಗಲು
ನೀನು ಮಾಡಿರುವುದಾದರೂ ಏನು.
ನೀನೇನು ಪಡೆದಿದ್ದರೂ ಅದನ್ನು ಇಲ್ಲಿಂದಲೇ
ಪಡೆದಿರುವೆ.
ಏನನ್ನು ನೀಡಿದ್ದರೂ ಅದನ್ನು ಇಲ್ಲಿಗೇ ನೀಡಿರುವೆ.
ನಿನ್ನೆ ಬೇರಾರದ್ದೋ ಆಗಿದ್ದದ್ದು
ಇಂದು ನಿನ್ನದಾಗಿದೆ ಮತ್ತು
ನಾಳೆ ಇನ್ಯಾರದ್ದೋ ಆಗಲಿದೆ.

**ಪರಿವರ್ತನೆ ಜಗದ ನಿಯಮ.**